ಜಮೀನನ್ನೂ ತೆಗೆದುಕೊಂಡಿದ್ದೀರಿ ಎಂಬುದಾಗಿ ಹೇಳಿದ್ದೀರಿ. ಯಾವಾಗ ಖಚಿತವಾಗಿ ಇದನ್ನು ಪ್ರಾರಂಭ ಮಾಡುತ್ತೀರಿ ಎಂಬುದನ್ನು ಹೇಳುತ್ತೀರಾ ?

ಶ್ರೀ ಎಂ. ಚಂದ್ರಶೇಖರ್.—ಇದಕ್ಕೆ ಬೇಕಾದಂತಹ ಡಿಸೈನ್, ಹಾಗೂ ಆರ್ಕಿಟೆಕ್ಟ್ ಎಲ್ಲ ಸೇರಿ 87.5 ಲಕ್ಷ ರೂಪಾಯಿಗಳು. ಟೆಂಡರ್‌ನ್ನು ಈಗ ಕರೆಯುವಂತಹ ವ್ಯವಸ್ಥೆಯಾಗಿದೆ. ಇನ್ನು ಎರಡು ತಿಂಗಳೊಳಗೆ ಈ ಕೆಲಸ ಪ್ರಾರಂಭವಾಗಬಹುದು.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಈಗ ತಾವೇನು ಪ್ಲಾನಿಟೇರಿಯನ್ನು ಕಟ್ಟುತ್ತಿದ್ದೀರಿ ಇದು ಎಲ್ಲ ಕಡೆ ಈಗಾಗಲೇ ಇರುವಂತಹ ರೀತಿಯಲ್ಲೇ ಇರುತ್ತದೆಯೇ ? ಅಲ್ಲಿ ಇರುವಂತಹ ವ್ಯವಸ್ಥೆ ಇಲ್ಲಿಯೂ ಇರುತ್ತದೆಯೇ ? ಅಥವಾ ಬೇರೆ ರೀತಿಯಲ್ಲಿರುತ್ತದೆಯೇ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸುತ್ತಾರೆಯೇ ?

ಶ್ರೀ ಎಂ. ಚಂದ್ರಶೇಖರ್.—ಎಲ್ಲ ಒಂದೇ ತರಹ ಇರುತ್ತದೆ. ಬಾಂಬೆಯಲ್ಲಿರತಕ್ಕಂತಹ ನೆಹರೂ ಪ್ಲಾನಿಟೇರಿಯಂನ ಆರ್ಕಿಟೆಕ್ಟ್ ಏನಿದೆ, ಅದಕ್ಕೆ ಒಪ್ಪಿಗೆಯನ್ನು ತೆಗೆದುಕೊಂಡಿದ್ದೇವೆ. ಅದೇ ಪ್ರಕಾರ ಇಲ್ಲಿಯೂ ಮಾಡುತ್ತಿದ್ದೇವೆ. ನಗರದಲ್ಲಿ ಒಂದು ಉತ್ತಮವಾದ ಪ್ಲಾನಿಟೇರಿಯಂ ಬರುತ್ತದೆ.

ವಿಷಯ : ನೇಮಕಾತಿ ಸಮಿತಿಗಳನ್ನು ರಚಿಸುವ ಕುರಿತು

ಪ್ರಶ್ನೆ 107 (34) ಶ್ರೀ ಎಸ್. ಎಸ್. ಪಾಟೀಲ್ (ಬಿಳಗಿ).—ಶ್ರೀ ಬಿ. ಬಿ. ಚಿಮ್ಮನಕಟ್ಟಿ (ಬಾದಾಮಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ, ಉತ್ತರಿಸುವರೇ :—

ಎ) ಎಷ್ಟು ನೇಮಕಾತಿ ಸಮಿತಿಗಳನ್ನು ರಚಿಸಲಾಗಿದೆ;

ಬಿ) ವಿವಿಧ ನೇಮಕಾತಿ ಸಮಿತಿಗಳ ಸದಸ್ಯರು ಯಾರು (ಖಾಸಗಿ ಸದಸ್ಯರ ವರ್ಗ, ಹಿಂದುಳಿದ ಜಾತಿ, ಪರಿಶಿಷ್ಟ ಜಾತಿ, ಪರಿಶಿಷ್ಟ ಬುಡಕಟ್ಟು ಇತ್ಯಾದಿಗಳನ್ನು ಸೂಚಿಸತಕ್ಕದ್ದು);

ಸಿ) ನೇಮಕಾತಿ ಸಮಿತಿಗಳಿಗೆ ಅಂತಹ ಸದಸ್ಯರುಗಳನ್ನು ಆರಿಸುವಾಗ ಅವಲಂಬಿಸಿದ ಅಳತೆಗೋಲು;

ಡಿ) ಯಾರ ಶಿಫಾರಿಸಿನ ಮೇಲೆ ಈ ನೇಮಕಾತಿ ಸಮಿತಿಗಳ ಸದಸ್ಯರುಗಳನ್ನು ಆರಿಸಲಾಗಿದೆ ?

ಶ್ರೀ ರಾಮಕೃಷ್ಣ ಹೆಗಡೆ, (ಮುಖ್ಯಮಂತ್ರಿಗಳು) :—

ಎ) 75.

ಬಿ) ಈ ಸಮಿತಿಗಳನ್ನು ರಚಿಸುವ ಬಗ್ಗೆ ಹೊರಡಿಸಿದ ಆದೇಶಗಳ ಪ್ರತಿಯನ್ನು ಸಭೆಯ ಮುಂದೆ ಇಡಲಾಗಿದೆ. ಈ ಆದೇಶಗಳಲ್ಲಿ ಸರ್ಕಾರಿ ಸದಸ್ಯರುಗಳ ಹುದ್ದೆಗಳನ್ನು ಮತ್ತು ಖಾಸಗಿ ಸದಸ್ಯರುಗಳ ಹೆಸರುಗಳು ಸೂಚಿಸಲಾಗಿದೆ. ಅವರ ಜಾತಿಗೆ ಸಂಬಂಧಪಟ್ಟ ಮಾಹಿತಿಯನ್ನು ಸಂಗ್ರಹಿಸಿ ಸದ್ಯದಲ್ಲಿ ಒದಗಿಲಾಗುವುದು.

ಸಿ) ಸಂಬಂಧಪಟ್ಟ ನಿಯಮ ಆದೇಶಗಳಲ್ಲಿ ನಿಗದಿಪಡಿಸಿದ ಅಳತೆಗೋಲನ್ನು ಅವಲಂಬಿಸಲಾಗಿದೆ.

ಡಿ) ಸರ್ಕಾರವು ಸಂಬಂಧಪಟ್ಟ ನಿಯಮ ಆದೇಶಗಳನ್ನು ಗಮನದಲ್ಲಿಟ್ಟು ಸದಸ್ಯರುಗಳನ್ನು ಆರಿಸಿರುವುದು.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಇದರಲ್ಲಿ ಪೂರ್ಣ ಉತ್ತರ ನಮಗೆ ಸಿಕ್ಕಿಲ್ಲ. ಇಲಾಖೆಯಲ್ಲಿ ನೇಮಕ ಮಾಡಿರತಕ್ಕಂತಹ ನೇಮಕಾತಿ ಸಮಿತಿಗಳಲ್ಲಿರತಕ್ಕಂತಹ ಸದಸ್ಯರ ಜಾತಿ ಅಂದರೆ ಬಿ.ಸಿ.ಎಸ್.ಸಿ. ಎಸ್.ಟಿ. ಇವುಗಳನ್ನು ತಿಳಿಸಿ ಎಂಬ ಪ್ರಶ್ನೆಗೆ ಇದನ್ನು ಸಂಗ್ರಹ ಮಾಡಿ ಆದಷ್ಟು ಜಾಗ್ರತೆ ತಿಳಿಸಲಾಗುವುದು ಎಂಬುದಾಗಿ ತಿಳಿಸಿದ್ದಾರೆ. ಹಾಗಾದರೆ ನಾವು ಪ್ರಶ್ನೆಯನ್ನು ಕೇಳುವಂತಹ ಮೂಲ ಉದ್ದೇಶವಾದರೂ ಏನು ?

ಉಪಾಧ್ಯಕ್ಷರು.—ಉತ್ತರ ಬಹಳ ಉದ್ದವಾಗಿರುವುದರಿಂದ, ಸಭೆಯ ಮುಂದೆ ಇಡಲಾಗಿದೆ. ಬೇಕಾದರೆ ತಾವು ಬಂದು ನೋಡಿಕೊಳ್ಳಬಹುದು, ಮಾನ್ಯ ಮುಖ್ಯ ಮಂತ್ರಿಗಳು ಈಗ ಅದಕ್ಕೆ ಉತ್ತರ ಕೊಡುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ಉತ್ತರ ಏನು ಕೊಟ್ಟಿದ್ದಾರೆ, ಅದರಲ್ಲಿ ನಂತರ ಒದಗಿಸಿಕೊಡಲಾಗುವುದು ಎಂಬುದಾಗಿ ಹೇಳಿದ್ದಾರೆ ಅವರು ಇದರ ಬಗ್ಗೆ ವಿವರಗಳನ್ನುಕ ಲೆಕ್ಟ್ ಮಾಡಲಿ, ಬೇಡ ಅನ್ನುವುದಿಲ್ಲ. It will takee its own time, I know that. Then you holdover the question and we can take it up afterwards. ಇಲ್ಲಿ ಟೇಬಲ್ ಮುಂದೆ ಒದಗಿಸಿಕೊಡುತ್ತೇವೆಂದು ಹೇಳಿದ್ದರೂ ಕೂಡ ಇದುವರೆಗೂ ಒದಗಿಸಿಲ್ಲಾ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಈಗಿನ ಪದ್ಧತಿ ಪ್ರಕಾರ ಇಂಥಾ ದಿವಸ ಇಂಥವರು ಇಂಥಾ ಪ್ರಶ್ನೆಗೆ ಉತ್ತರ ಕೊಡಬೇಕು ಎನ್ನುವ ನಿರ್ಬಂಧ ಇದೆ. ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆ ಇಡೀ ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ಸಂಬಂಧಪಟ್ಟದ್ದಾಗಿರುತ್ತದೆ. ಅದು ಕಮಿಟಿಗಳಿಗೆ

ಸಂಬಂಧಪಟ್ಟ ಪ್ರಶ್ನೆಯೇ ಆಗಿರಬಹುದು, ಅಥವಾ ಇನ್ನಾವುದಾದರೂ ಬೇರೆ ವಿಷಯಗಳಿಗೆ ಸಂಬಂಧ ಪಟ್ಟದ್ದಾಗಿರಬಹುದು, ಇಂಥಾ ದೊಡ್ಡ ಪ್ರಶ್ನೆಗಳಿಗೆ ಕ್ಲುಪ್ತವಾದ ಕಾಲದಲ್ಲಿ ವಿವರಗಳನ್ನು ಸಂಗ್ರಹಣೆ ಮಾಡಬೇಕಾದರೆ ಸಾಧ್ಯವಾಗುವುದಿಲ್ಲ. ಆದರೂ ಸಹ ಅದರ ಬಗ್ಗೆ ಮಾಹಿತಿಗಳನ್ನು ಸಂಗ್ರಹಣೆ ಮಾಡುವ ಹಾಗೆ ಹೇಳಿದ್ದೇನೆ. ಅದನ್ನು ಸಂಗ್ರಹಣೆ ಮಾಡಿ ಅದು ಬಂದನಂತರ ಟೇಬಲ್ ಮೇಲೆ ಇಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಈ ಪ್ರಶ್ನೆ ಬಗ್ಗೆ ಮಾಹಿತಿಗಳನ್ನು ಸಂಗ್ರಹಿಸಿ ಈ ಸದನಕ್ಕೆ ಒದಗಿಸ ಬೇಕಾದರೆ ತಮಗೆ ಎಷ್ಟು ಕಾಲಬೇಕು, ಯಾವಾಗ ಕರೆಕ್ಟ್ ಮಾಡಿ ಒದಗಿಸಿಕೊಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ,—ಸಾಧ್ಯವಾದಷ್ಟು ಬೇಗನೆ ಒದಗಿಸಿಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಇನ್ನು ಒಂದು ವಾರದಲ್ಲಿ ಒದಗಿಸಿಕೊಡುತ್ತಾರೆಂದು ತಿಳಿದು ಕೊಳ್ಳೋಣವೇ ? ಮಾನ್ಯ ಅಧ್ಯಕ್ಷರೆ ಈ ಪ್ರಶ್ನೆ ಈ ಕಡೆಯಲ್ಲಿರುವವರಿಗಾಗಲಿ, ಆ ಕಡೆಯಲ್ಲಿರುವವರಿಗಾಗಲಿ ಬಹಳ ಮುಖ್ಯವಾದ ಪ್ರಶ್ನೆ. ಸುಮಾರು 70–75 ಕಮಿಟಿಗಳು ಇರಬಹುದು, ತಮ್ಮ ಹತ್ತಿರ ಇದರ ಒಂದು ಲಿಸ್ಟ್ ಇದೆ. ನನಗೇನೋ ಇದಕ್ಕೆ ಉತ್ತರ ತರಿಸಿಕೊಡಲು ಅಷ್ಟು ಹೆಚ್ಚು ಕಾಲ ಬೇಕಾಗಿರುವುದಿಲ್ಲ ಅಂತ ಕಾಣುತ್ತದೆ.ಆದ ಎದರಿಂದ ದಯವಿಟ್ಟು ಇಷ್ಟರಲ್ಲೇ ಅಂದರೆ ಇನ್ನು ಒಂದು ವಾರದಲ್ಲೇ ಇದಕ್ಕೆ ಉತ್ತರವನ್ನು ಒದಗಿಸುವುದಕ್ಕೆ ಸಾಧ್ಯವೇ ?

ಶ್ರೀ ರಾಮಕೃಷ್ಣ ಹೆಗಡೆ.—ಇನ್ನು ಒಂದು ವಾರದೆಲ್ಲಿ ಅಂದರೆ ಅದು ಸಾಧ್ಯವಾಗುವುದಿಲ್ಲ. ಈ ಅಧಿವೇಶನ ಮುಗಿಯುವುದರೊಳಗೆ ತರಿಸಿಕೊಡುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ಸ್ವಾಮಿ ರೂಲ್ಸ್ ಆಫ್ ಪ್ರೊರಿಸೀಜರ್ ಪ್ರಕಾರ ಪ್ರಶ್ನೆಯನ್ನು ಅಡ್ಮಿಟ್ ಮಾಡಿದ ತಕ್ಷಣ, ಉತ್ತರವನ್ನು ತರಿಸಿರಬೇಕು. ಇಷ್ಟು ತಡವಾಗುವುದಕ್ಕೆ ಕಾರಣ ಇಲ್ಲ. ಲೆಂತಿ ಪ್ರಶ್ನೆಯಾದರೂ ಅಡ್ಮಿಟ್ ಆದ ತಕ್ಷಣ ಉತ್ತರ ತರಿಸಿಕೊಡಬೇಕಾಗಿತ್ತು.

ಉಪಾಧ್ಯಕ್ಷರು. ಅವರು ತಡವಾಗಿದೆ ಅಂತ ಹೇಳಲಿಲ್ಲ. ಇದರ ಬಗ್ಗೆ ಇನ್‌ಫರ್ಮೇಷನ್ ಅನ್ನು ತರಿಸಿಕೊಡುತ್ತೇನೆಂದು ಹೇಳಿದರು. Who are the members of the different Committees ? Indicate category wise. ಅಂತ ಅವರು ಕೇಳಿದ್ದಾರೆ. It will be a bulky answer.

ಶ್ರೀ ಕೆ. ಹೆಚ್. ರಂಗನಾಥ್.—ಹಾಗಾದರೆ ಇದು ಬಲ್ಕಿ ಆಗುತ್ತದೆ ಎಂದು ತಿಳಿದುಕೊಂಡ ಮೇಲೆ ಅದನ್ನ ಹೇಗೆ ಅಡ್ಮಿಟ್ ಮಾಡಿಕೊಂಡರು ?

ಉಪಾಧ್ಯಕ್ಷರು.—ಅದಷ್ಟು ಜಾಗ್ರತೆ ತರಿಸಿಕೊಡುತ್ತೇನೆಂದು ಹೇಳಿದರಲ್ಲಾ,

ಶ್ರೀ ಪಿ. ರಾಂದೇವ್.—ಅಧ್ಯಕ್ಷರೇ, ಹಿಂದೆ ಅವರ ಕಾಲದಲ್ಲಿ ಒಂದು ಪ್ರಶ್ನೆ ಹಾಕಿದ್ದು ಇದು ವರೆಗೂ ಕೂಡ ಉತ್ತರವೇ ಬಂದಿಲ್ಲಾ.

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಎಷ್ಟು ಕಾಲ ಬೇಕೋ ಅಷ್ಟು ತೆಗೆದುಕೊಳ್ಳಲಿ ಬೇಡ ಅನ್ನುವುದಿಲ್ಲ. ವಿಷಯ ಏನು ಎಂದರೆ ರೂಲ್ಸ್ ಆಫ್ ಪ್ರೊಸಿಜರ್ ಪ್ರಕಾರ, ಪ್ರಶ್ನೆಗೆ ಒಪ್ಪಿಗೆ ಕೊಡುವುದು ಬಿಡುವುದು ಅದು ಅವರಿಗೆ ಸಂಬಂಧಪಟ್ಟದ್ದು, ಆದರೆ ಪ್ರಶ್ನೆಯನ್ನು ಅಡ್ಮಿಟ್ ಮಾಡುವಾಗ ತಕ್ಷಣ ಅದಕ್ಕೆ ಉತ್ತರವನ್ನು ಒದಗಿಸಬೇಕೆಂದು ನಿಯಮ. ಇಲ್ಲದೇ ಹೋದರೆ ಈ ಪ್ರಶ್ನೆಯನ್ನು ಹಾಕಬಾರದಾಗಿತ್ತು ?

ಶ್ರೀ ರಾಮಕೃಷ್ಣ ಹೆಗಡೆ.—ಸಾಧ್ಯವಾದಷ್ಟು ಬೇಗನೆ ಅಂತ ಹೇಳಿದ್ದೇನಲ್ಲಾ. ಏತಕ್ಕೆಂದರೆ ಈ ಪ್ರಶ್ನೆ ಸ್ವಲ್ಪ ಔಟರ್ ಲಿಮಿಟ್‌ನಲ್ಲಿರುವುದರಿಂದ ಇದಕ್ಕೆ ಸ್ವಲ್ಪ ಹೆಚ್ಚು ಮಾಹಿತಿಗಳು ಬೇಕಾಗಿರುವುದರಿಂದ ಈ ಸದನ ಮುಗಿಯುವುದರೊಳಗೆ ತರಿಸಿಕೊಡುತ್ತೇನೆಂದು ಹೇಳಿದ್ದು.

ಶ್ರೀ ಕೆ. ಹೆಚ್. ರಂಗನಾಥ್.—ಅನಿವಾರ್ಯ ಸಂದರ್ಭ ಆದರೆ ಕಾಲ ತೆಗೆದುಕೊಳ್ಳಲಿ, ಆದರೆ ರೂಲ್ಸ್ ಆಫ್ ಪ್ರೊಸಿಜರ್ ಪ್ರಕಾರ ಅಧ್ಯಕ್ಷರು ಪ್ರಶ್ನೆಯನ್ನು ಅಡ್ಮಿಟ್ ಮಾಡಿಕೊಂಡ ಮೇಲೆ ಸಂಬಂಧಪಟ್ಟ ಇಲಾಖೆಯವರ ಹತ್ತಿರ ತಕ್ಷಣ ತರಿಸಿಕೊಂಡು ಮಾಹಿತಿ ಒದಗಿಸಬೇಕಾಗಿತ್ತು.

ಶ್ರೀ ರಾಮಕೃಷ್ಣ ಹೆಗಡೆ.—ತರಿಸಿಕೊಡುತ್ತೇನೆಂದು ಹೇಳಿದೆನಲ್ಲಾ

ಶ್ರೀ ಜಿ. ಪಿ. ವಟ್ಟೆಯರಾಜ್.—ಅವರು ಹೇಳಿದ ಮಾತನ್ನು ನಾನು ಒಪ್ಪುತ್ತೇನೆ.

ಈ ಸದನವನ್ನು ಯಾರಿಗೋಸ್ಕರವಾಗಿಯೂ ತಡೆಯುವುದಕ್ಕಾಗುವುದಿಲ್ಲ. ಸರ್ಕಾರದವರೂ ಸಹ ಈ ಮಾತನ್ನು ಒಪ್ಪಿಕೊಳ್ಳಬೇಕು. ನಾನು ಕೇಳುವುದೇನೆಂದರೆ ಮಾನ್ಯ ಮುಖ್ಯಮಂತ್ರಿಗಳು ಒಂದು ವಾರದಲ್ಲಿ ಉತ್ತರ ತರಿಸಿಕೊಡುತ್ತಾರೆಯೇ ಅಥವಾ ಎರಡು ವಾರದಲ್ಲಿ ಇದಕ್ಕೆ ಉತ್ತರವನ್ನು ತರಿಸಿಕೊಡುತ್ತಾರೆಯೇ ಎಂಬುದನ್ನು ಖಚಿತವಾಗಿ ಉತ್ತರ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ವಿಷಯ :—ಅರಕ್ಷಕ ಇಲಾಖೆಯಲ್ಲಿನ ದಕ್ಷತೆ ಹಾಗೂ ಶಿಸ್ತು ಹಾಗೂ ಶಾಂತಿಯ ನಿರ್ವಹಣೆ

ಪ್ರ. 109 (23) ಶ್ರೀ ಬಿ. ಬೈರಪ್ಪಾಜಿ (ತುರುವೆಕೆರೆ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ) ರಾಜ್ಯದಲ್ಲಿ 1980-81, 1981-82, 1982-83 ಹಾಗೂ 1983-84ರಲ್ಲಿ ಇಲ್ಲಿಯವರೆಗಿನ ಕೊಲೆಗಳು, ದರೋಡೆಗಳು, ಮತೀಯ ಗಲಭೆಗಳು ಹಾಗೂ ಇನ್ನಿತರ ಅಪರಾಧ